ಕುಳಿತು ಬೀದಿಯಲ್ಲಿ ಓಡಾಡುವ ಪರಿಚಿತರನ್ನು ಮಾತಾಡಿಸುತ್ತಿದ್ದರು. ಓದುವ ಹುಚ್ಚು ಇದ್ದ ರಾಯರು ಮನೆಯಲ್ಲೇ ಒಂದು ಪುಟ್ಟ ಲೈಬ್ರರಿ ಇಟ್ಟುಕೊಂಡಿದ್ದರು. ಸಾಯಂಕಾಲ ಗಂಡ–ಹೆಂಡತಿ ತಮ್ಮ ಪುಟ್ಟ ಕೈತೋಟದಲ್ಲಿ ಕೆಲಸ ಮಾಡುತ್ತಿದ್ದರು. ಸಾಯಂಕಾಲ ಇಬ್ಬರೂ ಮನೆಗೆ ಒಂದು ಕಿ.ಮೀ. ದೂರದಲ್ಲಿದ್ದ ಗಣೇಶನ ಗುಡಿಗೆ ಹೋಗಿ ಬರುತ್ತಿದ್ದರು. ನಂತರ ಒಂಬತ್ತು ಗಂಟೆಯ ಒಳಗೆ ಚಪಾತಿ, ಇಡ್ಲಿ, ದೋಸೆ ಏನಾದರೂ ತಿಂಡಿ ತಿನ್ನುತ್ತಿದ್ದರು. ರಾಯರು ತಮ್ಮ ಲೈಬ್ರರಿ ಸೇರಿದರೆ, ರಕ್ಮಾ ಧಾರಾವಾಹಿಗಳನ್ನು ನೋಡುತ್ತಿದ್ದರು. ಹತ್ತು ಗಂಟೆಗೆ ಹಾಲು ಕುಡಿದು ಮಲಗುತ್ತಿದ್ದರು.

ಪರಿಚಯದವರು ಆಗಾಗ್ಗೆ ಬರುತ್ತಿದ್ದರು. ಹೊತ್ತು ಹೋಗುವುದೇ ತಿಳಿಯುತ್ತಿರಲಿಲ್ಲ. ಮಕ್ಕಳಿಂದ ದೂರವಾಗಿದ್ದರೂ ಅವರು ನೆಮ್ಮದಿಯಿಂದಿದ್ದರು. ಒಂದು ಬೆಳಿಗ್ಗೆ ರಾಯರು ಕಾಫಿ ಕುಡಿದವರು, ಎಂದಿನಂತೆ ವಾಕಿಂಗ್ ಹೊರಡದಿದ್ದಾಗ ರಕ್ಮಾಗೆ ಆತಂಕವಾಗಿತ್ತು.

‘ಯಾಕೆ ವಾಕಿಂಗ್ ಹೋಗಲಿಲ್ಲ? ಹುಷಾರಾಗಿದ್ದೀರೋ ಇಲ್ಲವೋ?’

‘ನೆನ್ನೆ ಬೆಳಿಗ್ಗೆಯಿಂದ ಸಾಯಂಕಾಲದವರೆಗೂ ಮದುವೆ ಮನೆಯಲ್ಲಿದ್ದೆವಲ್ಲಾ, ಆಯಾಸ ಆಗಿದೆ ಅಷ್ಟೆ...’

‘ನಿಮ್ಮ ಫ್ರೆಂಡ್ ಮಗಳ ಮದುವೆ. ನಾವು ಹೋಗಬೇಕಾಗಿದ್ದುದು ಸರಿಯಾದ ನಿರ್ಧಾರ. ಧಾರೆ ಮುಗಿಸಿಕೊಂಡು ನಾವು ಬಂದು ಬಿಡಬೇಕಿತ್ತು.’

‘ನನ್ನ ಸ್ನೇಹಿತರೆಲ್ಲಾ ಇದ್ರಲ್ಲಾ. ನಾನೂ ಇದ್ದೆ. ನಿನಗೂ ಕಂಪನಿ ಇತ್ತಲ್ಲಾ?’

‘ಇವತ್ತು ವಾಕಿಂಗ್ ಹೋಗಬೇಡಿ. ಮನೆ ಬಿಟ್ಟು ಅಲ್ಲಾಡದೆ ರೆಸ್ಟ್ ತೆಗೆದುಕೊಳ್ಳಿ.’

ಹತ್ತು ಗಂಟೆಯ ಹೊತ್ತಿಗೆ ಜ್ವರ ಕಾಣಿಸಿಕೊಂಡಿತ್ತು. ಫ್ಯಾಮಿಲಿ ಡಾಕ್ಟರ್ ಡಾ. ಸುಧೀಂದ್ರ ಬಂದು ನೋಡಿದ್ದರು.

‘ನಮ್ಮ ನರ್ಸಿಂಗ್ ಹೋಂಗೆ ಸೇರಿಸಿಬಿಡಿ. ಒಂದು ಸಲ ಕಂಪ್ಲೀಟ್ ಚೆಕಪ್ ಮಾಡೋಣ’ ಎಂದಿದ್ದರು.

ಅದರಂತೆ ನರ್ಸಿಂಗ್‌ಹೋಂಗೆ ಸೇರಿಸಲಾಗಿತ್ತು. ಎಲ್ಲಾ ಟೆಸ್ಟ್‌ಗಳನ್ನೂ ಮಾಡಿದ್ದರು. ಜ್ವರ ಕಂಟ್ರೋಲ್‌ಗೆ ಬಂದಿತ್ತು. ಮನೆಗೆ ಬಂದ ಮರುದಿನವೇ ‘ಹಾರ್ಟ್ ಅಟ್ಯಾಕ್’ ಆಗಿ ಹೋಗಿಬಿಟ್ಟಿದ್ದರು. ತಿಥಿ ಕಾರ್ಯ ಮುಗಿದ ನಂತರ ಮಗಳು ಹೇಳಿದ್ದಳು. ‘ಅಮ್ಮಾ, ನೀನು ಇಲ್ಲಿ ಒಬ್ಬಳೇ ಇದ್ದು ಏನ್ಮಾಡ್ತೀಯ? ನಮ್ಮ ಜೊತೆ ಬೆಂಗಳೂರಿಗೆ ಬಾ.’

‘ಅಲ್ಲಿಗೆ ಬಂದು ಏನ್ಮಾಡಲೇ?’

‘ಇಲ್ಲಿ ನೀನು ಒಂಟಿಯಾಗಿರಬೇಕು. ಬೆಂಗಳೂರಲ್ಲಿ ಮೊಮ್ಮಕ್ಕಳ ಜೊತೆ ಇರಬಹುದಲ್ವಾ? ಈ ಮನೆ ಬಾಡಿಗೆಗೆ ಕೊಡು.’

‘ಒಂದು ತಿಂಗಳು ಟೈಂ ಕೊಡು.’

‘ಆಗಲೀಮ್ಮ, ಒಂದು ತಿಂಗಳಲ್ಲಿ ಇಲ್ಲಿ ಎಲ್ಲಾ ವ್ಯವಸ್ಥೆ ಮಾಡು’ ಎಂದಿದ್ದಳು ವಸುಧಾ.

‘ಹೌದಮ್ಮ, ನೀನು ವಸುಧಾ ಜೊತೆ ಇದ್ದರೆ ನನಗೂ ಸಮಾಧಾನ’ ಎಂದಿದ್ದ ವಿವೇಕ್.

ಶ್ರೀಪಾದರಾಯರು ನಿವೃತ್ತರಾದ ಕೂಡಲೆ ಮಹಡಿಯ ಮೇಲೆ ಎರಡು ರೂಮ್‌ಗಳ ಮನೆ ಕಟ್ಟಿಸಿದ್ದರು. ಆ ಮನೆಯಲ್ಲಿ ರಾಮಾವಧಾನಿಗಳು ಬಾಡಿಗೆಗಿದ್ದರು. ಅವರು ರಾಯರಿಗೆ ಸ್ವಂತ ತಮ್ಮನಂತಿದ್ದರು. ರಕ್ಮಾ ಅವರಿಗೆ ತಾವು ಕೆಳಗಿನ ಮನೆ ಬಾಡಿಗೆಗೆ ಕೊಡಬೇಕೆಂದಿರುವ ವಿಚಾರ ಹೇಳಿದ್ದರು.

‘ಅಮ್ಮಾ, ನೀವು ಮಗಳ ಮನೆಗೆ ಖಂಡಿತಾ ಹೋಗಿ. ನಿಮ್ಮ ಮೊಮ್ಮಗಳು ಎಂಜಿನಿಯರಿಂಗ್ ಓದ್ತಿದ್ದಾಳೆ. ಮೊಮ್ಮಗ ಹೈಸ್ಕೂಲಿನಲ್ಲಿದ್ದಾನೆ. ನೀವು ಅವರ ಜೊತೆ ಹೊಂದಿಕೊಳ್ಳಲು ಸಾಧ್ಯಾನಾ? ಈಗಿನ ಮಕ್ಕಳು ನಮ್ಮಂತಹವರಿಗೆ ಅರ್ಥವಾಗೋದು ಕಷ್ಟ. ನಿಮಗೆ ಹೊಂದಿಕೊಳ್ಳಲಾಗದಿದ್ದರೆ ಏನ್ಮಾಡ್ತೀರ? ಆಗ ಇಲ್ಲಿಗೆ ವಾಪಸ್ಸಾಗಬಹುದಲ್ವಾ?’

ಅವರ ಮಾತುಗಳನ್ನು ಕೇಳಿದ ಮೇಲೆ ರಕ್ಮಾಗೆ ತಾನು ದುಡುಕುವುದು ಬೇಡ ಎನ್ನಿಸಿತ್ತು.

‘ವಸು, ನಾನು ನಿನ್ನ ಜೊತೆ ಬರ್ತೀನಿ. ನಿಮ್ಮ ತಂದೆಯ ವರ್ಷಾಬ್ದಿಕದ ನಂತರ ಮನೆ ಬಾಡಿಗೆಗೆ ಕೊಡ್ತೇನೆ’ ಎಂದಿದ್ದರು ಮಗಳಿಗೆ.

‘ಹಾಗೇ ಮಾಡಮ್ಮ’ ಎಂದಿದ್ದಳು ವಸುಧಾ.

ಮಗಳ ಮನೆಯಲ್ಲಿ ಎಲ್ಲಾ ಅನುಕೂಲಗಳಿದ್ದವು. ಅವರಿಗೆ ಒಂದು ರೂಮು ಕೊಟ್ಟಿದ್ದರು. ಅಡುಗೆಯಾಕೆ ಅಡುಗೆ, ತಿಂಡಿ ಮಾಡುತ್ತಿದ್ದರು. ಒಳ್ಳೆಯ ಕೆಲಸದವರಿದ್ದರು. ಆದರೆ ಮಗಳಿಗಾಗಲಿ, ಮೊಮ್ಮಕ್ಕಳಿಗಾಗಲಿ ಅವರ ಜೊತೆ ಕುಳಿತು ಮಾತಾಡುವಷ್ಟು ಬಿಡುವಿರಲಿಲ್ಲ. ಬೆಳಿಗ್ಗೆ ಕೆಲಸಕ್ಕೆ, ಕಾಲೇಜಿಗೆ ಹೋಗುವ ಗಡಿಬಿಡಿ. ಸಾಯಂಕಾಲ ಮನೆಗೆ ಬಂದೊಡನೆ ಎಲ್ಲಾ ತಮ್ಮ ತಮ್ಮ ಮೊಬೈಲ್‌ನಲ್ಲಿ ಮುಳುಗಿರುತ್ತಿದ್ದರು.

ಒಂದು ಸಾಯಂಕಾಲ ತನ್ವಿ ಬೇಗ ಮನೆಗೆ ಬಂದಿದ್ದಳು.

‘ತುಂಬಾ ಹಸಿವೆ. ಏನೂ ತಿಂಡಿ ಇಲ್ವಾ?’ ಎಂದು ಕೇಳಿದ್ದಳು.

‘ಇಲ್ಲ. ಹುಳಿಯನ್ನ ಕಲಸಿಕೊಡಲಾ?’

ಅವಳು ಜೋರಾಗಿ ನಕ್ಕಿದ್ದಳು.

‘ಯಾಕೆ ನಗ್ತೀಯಾ?’

‘ಅಂತಹದ್ದೆಲ್ಲಾ ನಿಮ್ಮ ಕಾಲದ ಪದ್ಧತಿ. ಇನ್ನೇನು ತುಷಾರ್ ಬರ್ತಾನೆ. ನಾವು ಪಿಜ್ಜಾ ತರಿಸಿಕೊಂಡು ತಿನ್ನುತ್ತೀವಿ.’

ಅವಳು ಆನ್‌ಲೈನ್‌ನಲ್ಲಿ ಬುಕ್ ಮಾಡಿದ್ದಳು. ತಮ್ಮನ ಜೊತೆ ಅಜ್ಜಿಯ ಪೆದ್ದುತನ ಹೇಳಿ ಆಡಿಕೊಂಡು ನಕ್ಕಿದ್ದಳು. ಅವರು ಮಗಳು ಬಂದ ಮೇಲೆ ಕೇಳಿದ್ದರು.

‘ನಾನು ಕೇಳಿದ್ರಲ್ಲಿ ಏನು ತಪ್ಪಿದೆ?’

‘ನಿಂಗೆ ಗೊತ್ತಾಗಲ್ಲಮ್ಮ, ಅವರು ಈಗಿನ ಕಾಲದವರು. ಅವರಿಗಿಷ್ಟ ಬಂದಿದ್ದು ತಿನ್ನಲಿಬಿಡು.’

ಅವರೇನು ಮಾತನಾಡಲು ಸಾಧ್ಯ?

ಒಂದು ರಾತ್ರಿ ಅವರಿಗೆ ಒಂದು ಗಂಟೆಗೆ ಎಚ್ಚರವಾಗಿತ್ತು. ತೆರೆದ ಕಿಟಕಿಯಿಂದ ತನ್ವಿ ಒಳಗೆ ಬರುವುದು ಕಾಣಿಸಿತ್ತು.

ಮರುದಿನ ಭಾನುವಾರ ತಿಂಡಿಯಾದ ಮೇಲೆ ಮಗಳನ್ನು ತಮ್ಮ ರೂಂಗೆ ಕರೆದು ಹೇಳಿದ್ದರು. ‘ವಸುಧಾ ತನ್ವಿ ನೆನ್ನೆ ರಾತ್ರಿ ಒಂದು ಗಂಟೆಗೆ ಮನೆಗೆ ಬಂದಳು. ಹೆಣ್ಣುಮಕ್ಕಳು ಮನೆಗೆ ಬರುವ ಹೊತ್ತಾ ಅದು? ಅದೂ ಯಾರದೋ ಕಾರಲ್ಲಿ...’

‘ಅಮ್ಮಾ ಅವಳು ಯಾವುದೋ ಪಾರ್ಟಿಗೆ ಹೋಗಿದ್ದಳಂತ ಕಾಣತ್ತೆ. ಈಗ ಅದೆಲ್ಲಾ ಕಾಮನ್ ಅಮ್ಮಾ.’

‘ಆದರೂ ವಸು, ತಾಯಿಯಾಗಿ ನೀನು ಅವಳಿಗೆ ಬುದ್ಧಿ ಹೇಳಬೇಕಲ್ವಾ? ನಾಳೆ ಅಕ್ಕಪಕ್ಕದವರು ಏನಂತಾರೆ ಅನ್ನುವ ಯೋಚನೆ ಬೇಡವಾ? ವಯಸ್ಸಿಗೆ ಬಂದಿರುವ ಹುಡುಗಿ ಹೊತ್ತಲ್ಲದ ಹೊತ್ತಿನಲ್ಲಿ ಹುಡುಗರ ಜೊತೆ ತಿರುಗೋದು ಒಳ್ಳೆಯದಾ?’

‘ಅಮ್ಮಾ, ಬೆಂಗಳೂರಿನಲ್ಲಿ ಅಕ್ಕಪಕ್ಕದಲ್ಲಿ ಯಾರಿದ್ದಾರೆ ಅನ್ನುವುದೇ ಗೊತ್ತಿರಲ್ಲ. ಕಾಲ ಬದಲಾಗಿದೆಯಮ್ಮ. ನಾವು ಮಕ್ಕಳನ್ನು ಕಂಟ್ರೋಲ್ ಮಾಡಕ್ಕಾಗಲ್ಲ. ಈಗಿನವರು ಸಣ್ಣ ಸಣ್ಣ ವಿಚಾರಕ್ಕೆ ಆತ್ಮಹತ್ಯೆ ಮಾಡಿಕೊಳ್ತಾರೆ.’

‘ಹಾಗಂತಾ ಅವರು ಹೋದ ದಾರಿಗೆ ಬಿಡಕ್ಕಾಗತ್ತೇನೆ?’

‘ಬಿಡಲೇ ಬೇಕಮ್ಮ. ಬೇರೆ ದಾರೀನೇ ಇಲ್ಲ.’

ರಕ್ಮಾ ಮಾತಾಡಿರಲಿಲ್ಲ. ‘ಅಪ್ಪ–ಅಮ್ಮ ಮಕ್ಕಳಿಗೆ ಸರಿಯಾದ ನಡೆ–ನುಡಿ ಕಲಿಸದಿದ್ದರೆ ಹೇಗೇ ಆಗುವುದು’ ಎಂದುಕೊಂಡರು. ಯಾಕೋ ಅವರಿಗೆ ಆ ಉಸಿರು ಕಟ್ಟಿಸುವ ವಾತಾವರಣದಲ್ಲಿ ಇರಲು ಇಷ್ಟವಾಗಲಿಲ್ಲ. ಕೆಲವು ಭಾನುವಾರಗಳಲ್ಲಿ ಕೆಂಗೇರಿಗೆ ಹೋಗಿ ಮನೆ ಕ್ಲೀನ್ ಮಾಡಿಸಿ ಮರುದಿನ ಬರುತ್ತಿದ್ದರು. ವಸುಧಾ ಏನನ್ನೂ ಪ್ರಶ್ನಿಸುತ್ತಿರಲಿಲ್ಲ. ರಾಯರ ವರ್ಷಾಬ್ದಿಕ ಹತ್ತು ದಿನಗಳಿದೆ ಎನ್ನುವಾಗ ಅವರು, ‘ವಸುಧಾ, ನಾನು ಹೋಗಿ ಎಲ್ಲಾ ಏರ್ಪಾಡು ಮಾಡ್ತೀನಿ. ನಾನು ಎದುರಿಗಿದ್ರೆ ರಾಮಾವಧಾನಿಗಳು ನಿಧಾನವಾಗಿ ಏನೂ ಕೊರತೆಯಾಗದಂತೆ ಎಲ್ಲಾ ಸಿದ್ಧತೆ ಮಾಡ್ತಾರೆ’ ಎಂದಿದ್ದರು. ವಸುಧಾ ಬೇಡವೆನ್ನಲು ಕಾರಣವಿರಲಿಲ್ಲ.

ವರ್ಷಾಬ್ದಿಕಕ್ಕೆ ವಿವೇಕ್ ಮಾತ್ರ ಬಂದಿದ್ದ. ವಸುಧಾ ಒಂದು ದಿನ ಮಾತ್ರ ಬಂದು ಹೋಗಿದ್ದಳು.

‘ವಸುಧಾ ನಾನು ಇನ್ನು ಮೇಲೆ ಇಲ್ಲೇ ಇರ್ತೀನಿ. ನನಗೆ ಇಲ್ಲಿದ್ದರೆ ನೆಮ್ಮದಿ.’

‘ನಿನಗೆಲ್ಲಿ ಸಂತೋಷ ಸಿಗುತ್ತದೋ ಅಲ್ಲೇ ಇರಮ್ಮ’ ಎಂದಿದ್ದಳು ಮಗಳು.

ಇದೆಲ್ಲಾ ನಡೆದು ನಾಲ್ಕೈದು ತಿಂಗಳುಗಳು ಉರುಳಿದ್ದವು. ಬಿಸಿಲು ಚುರುಕಾದಾಗ ರಕ್ಮಾ ಒಳಗೆ ಹೋದರು. ಅಷ್ಟರಲ್ಲಿ ಅವರ ಮೊಬೈಲ್ ರಿಂಗಾಯಿತು. ವಸುಧಾ ಫೋನ್ ಮಾಡಿದ್ದಳು.

‘ಅಮ್ಮಾ, ನಾನು ಈ ಭಾನುವಾರ ಬೆಳಿಗ್ಗೆ 11 ಗಂಟೆಗೆ ಬರ್ತಿದ್ದೀನಿ. ನಿನ್ನ ಹತ್ತಿರ ಒಂದು ಮುಖ್ಯವಾದ ವಿಷಯ ಮಾತಾಡಬೇಕು.’

‘ಏನು ವಿಷಯ ವಸುಧಾ?’

‘ಬಂದು ಹೇಳ್ತೀನಿ ಅಂದ್ನಲ್ಲಾ? ನಮ್ಮ ಫ್ಯಾಮಿಲಿ ವಿಷಯ. ನೀನು ಏನೇನೋ ಯೋಚಿಸಿ ತಲೆಕೆಡಿಸಿಕೊಳ್ಳಬೇಡ.’

ರಕ್ಮಾ ನೆಮ್ಮದಿಯ ಉಸಿರೆಳೆದುಕೊಂಡರು. ಭಾನುವಾರ ಮಗಳು ಬರುವ ವೇಳೆಗೆ ಅವಳಿಗಿಷ್ಟವಾದ ಅಡುಗೆ ಮಾಡಿಟ್ಟರು.